# ಕೃತಿ ಪತ್ರಿಕೆಯ ರೂಪರೇಷೆ [ಗುಣವಿಭಾಗ ಸಹಿತ]

## ವಿಷಯ – ಕನ್ನಡ (ಸಂಯುಕ್ತ) (Format of Std Xth Kannada Composite)

**ಇಯತ್ತೆ : 10 ನೆಯ** **ಒಟ್ಟು ಗುಣಗಳು : 40** **ವೇಳೆ : 2 ತಾಸು**

---

### ಭಾಗ –I ಗದ್ಯ (Prose) (ಒಟ್ಟು 12 ಗುಣಗಳು)

ಪ್ರ. 1) ಅ] ಪಠ್ಯಾಧಾರಿತ ಗದ್ಯಖಂಡವನ್ನು ಓದಿ ಕೊಟ್ಟ ಕೃತಿಗಳನ್ನು ಮಾಡಿರಿ. (6 ಗುಣಗಳು)

1] ಗ್ರಹಣ ಶಕ್ತಿ ಆಧರಿಸಿದ ಕೃತಿ (4 ಘಟಕಗಳು; ಪ್ರತಿಯೊಂದಕ್ಕೆ ಅರ್ಧ ಗುಣ) 2 ಗುಣ

| 60 ರಿಂದ 80 ಶಬ್ದಗಳ ಗದ್ಯಖಂಡ |
|---|

2] ಶಬ್ದ ಸಂಪತ್ತಿನ ಕೃತಿ (ಪ್ರತಿ ಅರ್ಧ ಗುಣದ 4 ಘಟಕಗಳು) ಅಥವಾ 2 ಗುಣ
ವ್ಯಾಕರಣದ ಕೃತಿ (ಪ್ರತಿ 1 ಗುಣದ 2 ಘಟಕಗಳು)

3] ಸ್ವ ಅಭಿಪ್ರಾಯಕ್ಕೆ ಸಂಬಂಧಿಸಿದ ಕೃತಿ (ಪೂರ್ವ ಜ್ಞಾನ ಆಧರಿತ) 2 ಗುಣ
(6 ರಿಂದ 8 ವಾಕ್ಯಗಳ ಉತ್ತರ ಬರೆಯುವದು)

ಪ್ರ. 1) ಬ] ಮೇಲಿನಂತೆ ಕೃತಿಯ ರಚನೆ (6 ಗುಣಗಳು)

### ಭಾಗ –II ಪದ್ಯ (Poetry) (ಒಟ್ಟು 10 ಗುಣಗಳು)

ಪ್ರ. 2) ಅ] ಪಠಿತ ಪದ್ಯಭಾಗವನ್ನು ಓದಿ ಕೊಟ್ಟ ಕೃತಿಗಳನ್ನು ಮಾಡಿರಿ. (5 ಗುಣಗಳು)

1] ಗ್ರಹಣ ಶಕ್ತಿಯ ಮೇಲೆ ಆಧರಿಸಿದ ಕೃತಿ (1 ಗುಣದ ಎರಡು ಘಟಕಗಳು) 2 ಗುಣ

| ಪದ್ಯಖಂಡ 6 ರಿಂದ 8 ಸಾಲು ಅಥವಾ 2/3 ನುಡಿಗಳು |
|---|

2] ಶಬ್ದ ಸಂಪತ್ತು (ಅರ್ಥ, ವಿವಿಧಾರ್ಥ, ವಿರುದ್ಧಾರ್ಥ ಶಬ್ದಗಳು) 1 ಗುಣ
(ಎರಡು ಘಟಕಗಳು; ಪ್ರತಿಯೊಂದಕ್ಕೆ ಅರ್ಧಗುಣ)

3] ಪದ್ಯದ ಭಾವಾರ್ಥ ಅಥವಾ ಸಂದೇಶ ಕೊಡುವಂತಹ ಕೃತಿ. 2 ಗುಣ
(6 ರಿಂದ 8 ವಾಕ್ಯಗಳಲ್ಲಿ ಉತ್ತರ ಬರೆಯಿರಿ.)

ಪ್ರ. 2) ಬ] ಮೇಲಿನಂತೆ ಕೃತಿಗಳನ್ನು ಮಾಡಬೇಕು. (5 ಗುಣಗಳು)

### ಭಾಗ –III ವ್ಯಾಕರಣ (Grammar) (ಒಟ್ಟು 6 ಗುಣಗಳು)

ಪ್ರ. 3) ಕೆಳಗಿನ ಸೂಚನೆಗಳಿಗನುಸಾರವಾಗಿ ಕೃತಿ ಮಾಡಿರಿ.

1) ಲಿಂಗ, ವಚನ ಹಾಗೂ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸುವುದು. 1 ಗುಣ
2) ಕಾಲ ಗುರುತಿಸುವುದು. 1 ಗುಣ
3) ನಾಮಪದ, ಸರ್ವನಾಮ ಗುರುತಿಸುವುದು. 1 ಗುಣ
4) ಕ್ರಿಯಾಪದವನ್ನು ಸಕರ್ಮಕ, ಅಕರ್ಮಕ ರೂಪದಲ್ಲಿ ಬದಲಾಯಿಸಿ ವಾಕ್ಯ ಬರೆಯುವುದು. 1 ಗುಣ
5) ಕರ್ತೃ, ಕರ್ಮ, ಕ್ರಿಯಾಪದಗಳನ್ನು ಗುರುತಿಸಿ ಬರೆಯುವುದು. 2 ಗುಣ

(ಮೇಲಿನ ಪ್ರತಿಯೊಂದು ಕೃತಿಯನ್ನು 1 ಗುಣದ 2 ಘಟಕಗಳು ಅಥವಾ ಅರ್ಧ ಗುಣದ 4 ಘಟಕಗಳ ರೂಪದಲ್ಲಿ ಕೇಳಬೇಕು.)

## ಭಾಗ –IV ಬರವಣಿಗೆಯ ಕೌಶಲ್ಯಗಳು (Writing Skills) (ಒಟ್ಟು 12 ಗುಣಗಳು)

ಪ್ರ. 4) ಕೆಳಗಿನ ಪ್ರತಿಯೊಂದು ಕೃತಿಗೆ 60 ರಿಂದ 80 ಶಬ್ದಗಳಲ್ಲಿ ಉತ್ತರಿಸಬೇಕು.

i] ಪತ್ರಲೇಖನ : ಅನೌಪಚಾರಿಕ ಪತ್ರ ಬರೆಯಲು ಎರಡು ವಿಷಯಗಳನ್ನು ನೀಡಬೇಕು. 4 ಗುಣ
(ಬೇಕಾದ ಒಂದನ್ನು ಬಿಡಿಸಲು ಕೇಳಬೇಕು.)

ii] ಅನುವಾದ (ಭಾಷಾಂತರ) : ಇಂಗ್ಲೀಷ ಭಾಷೆಯಿಂದ ಕನ್ನಡಕ್ಕೆ ಅನುವಾದ ಮಾಡಬೇಕು. 4 ಗುಣ
(ಇಂಗ್ಲೀಷಿನಲ್ಲಿ 4 ರಿಂದ 5 ಸಾಲುಗಳ ಮಾಹಿತಿ ನೀಡಬೇಕು)

iii] ಕೆಳಗಿನ ಕೃತಿಗಳಲ್ಲಿ ಬೇಕಾದ ಒಂದನ್ನು ಕೇಳಬೇಕು. ಆಯ್ಕೆ ಮಾಡಿಕೊಂಡ ಕೃತಿಗೆ ಅದೇ ಮಾದರಿಯ ಪರ್ಯಾಯ ನೀಡಬೇಕು. 4 ಗುಣ

ಕಥೆ ಬರಹ : ಕೊಟ್ಟ ಅಂಶಗಳ ಸಹಾಯದಿಂದ ಕಥೆ ಪೂರ್ಣಗೊಳಿಸುವುದು.

ಅಥವಾ

ಸಂಭಾಷಣೆ ಬರಹ : ಕೊಟ್ಟ ಅಂಶಗಳ ಸಹಾಯದಿಂದ ಸಂಭಾಷಣೆ ಬರೆಯುವುದು.

ಅಥವಾ

ಅನುಭವ ಕಥನ (ಪ್ರಸಂಗ ವರ್ಣನೆ) : ಕೊಟ್ಟ ಸಂದರ್ಭಕ್ಕನುಸಾರವಾಗಿ ಬರೆಯುವುದು.

### ಗುಣ ವಿಭಜನೆ

| ಪ್ರ. ಕ್ರ | ವಿಭಾಗ | ಒಟ್ಟು ಗುಣಗಳು |
|---|---|---|
| 1. | ಗದ್ಯ | 12 |
| 2. | ಪದ್ಯ | 10 |
| 3. | ವ್ಯಾಕರಣ | 06 |
| 4. | ಬರವಣಿಗೆ ಕೌಶಲ್ಯಗಳು | 12 |
| | ಒಟ್ಟು | 40 |

# ಕೃತಿ ಪತ್ರಿಕೆ ನಮೂನೆ

## Std : 10th Kannada (Composite) Activity Sheet

ಇಯತ್ತೆ : 10 ನೆಯ　　ಕನ್ನಡ (ಸಂಯುಕ್ತ)　　ಗುಣಗಳು : 40　　ಸಮಯ: 2 ತಾಸು

### ವಿಭಾಗ I – ಗದ್ಯ (Prose)

ಪ್ರ. 1) ಅ) ಕೆಳಗಿನ ಗದ್ಯಖಂಡವನ್ನು ಓದಿ ಅದರ ಕೆಳಗೆ ಕೊಟ್ಟ ಕೃತಿಗಳನ್ನು ಮಾಡಿರಿ.

1) ಭರತನಿಗೆ ಅಯೋಧ್ಯೆ ಕಾಂತಿಹೀನವಾಗಿ ಕಾಣಲು ಕಾರಣಗಳು : (2)




ಭರತ : ಅಮ್ಮಾ, ಅಮ್ಮಾ! ಅಯೋಧ್ಯೆಯೆಲ್ಲಾ ಕಾಂತಿಹೀನವಾಗಿದೆ. ಪ್ರಜೆಗಳೆಲ್ಲಾ ಕಳೆಗುಂದಿದ್ದಾರೆ. ಅರಮನೆಯೆಲ್ಲಾ ಬಿಕೋ ಎನ್ನುತ್ತಿದೆ. ತಂದೆಯವರು ಎಲ್ಲಿಯೂ ಕಾಣಿಸುವುದಿಲ್ಲವಲ್ಲ! ಅಣ್ಣ ಶ್ರೀರಾಮಚಂದ್ರನೂ ಕಾಣಿಸುತ್ತಿಲ್ಲ. ಅತ್ತಿಗೆ ಸೀತಾ ಮಾತೆ ಎಲ್ಲಿ? ಅಣ್ಣ ಲಕ್ಷ್ಮಣ ಎಲ್ಲಿ ಹೋದ? ಹೇಳಮ್ಮ ಬೇಗ ಹೇಳಮ್ಮ.

ಕೈಕೇಯಿ : ಅಪ್ಪಾ ಭರತ! ದಶರಥ ಮಹಾರಾಜರು ಸ್ವರ್ಗಸ್ಥರಾದರು.

ಭರತ : ಅಯ್ಯೋ! ಎಂಥ ದುಃಸ್ಥಿತಿ ಬಂತು ನಮಗೆ. ತಂದೆಯವರು ಸ್ವರ್ಗವಾಸಿಯಾದರೇ ! ಅಮ್ಮಾ ತಂದೆಯವರು ಏನು ಹೇಳಿದರಮ್ಮಾ ಕಡೆಗಾಲದಲ್ಲಿ ?

ಕೈಕೇಯಿ : ಹಾ ರಾಮ! ಹಾ ಸೀತಾ! ಹಾ ಲಕ್ಷ್ಮಣ! ಎಂದು ಹಂಬಲಿಸುತ್ತ ಪ್ರಾಣ ಬಿಟ್ಟರು, ಭರತ.

ಭರತ : ಏನು? ಹಾ ರಾಮ! ಹಾ ಸೀತಾ! ಹಾ ಲಕ್ಷ್ಮಣ! ಎಂದು ಹಂಬಲಿಸುತ್ತ ಪ್ರಾಣ ಬಿಟ್ಟರೇ ತಂದೆಯವರು ....?

ಕೈಕೇಯಿ : ಹೌದು ಭರತ. ಅವರು ಸಾಯುವಾಗ ಶ್ರೀರಾಮಚಂದ್ರನು ದೊರೆಯ ಬಳಿ ಇರಲಿಲ್ಲ.

ಭರತ : ಆಶ್ಚರ್ಯ! ಅಣ್ಣ ಶ್ರೀರಾಮಚಂದ್ರ ತಂದೆಯವರ ಬಳಿ ಇರಲಿಲ್ಲವೇ? ಅಮ್ಮಾ ಆ ಸಮಯದಲ್ಲಿ?

ಕೈಕೇಯಿ : ಮಗೂ ಭರತ, ನಿನ್ನ ಅಣ್ಣ ಶ್ರೀ ರಾಮಚಂದ್ರ, ಸೀತೆ, ಲಕ್ಷ್ಮಣರೊಡನೆ ಆಗ ದಂಡಕಾರಣಕ್ಕೆ ವನವಾಸಕ್ಕೆ ಹೋಗಿ ಬಿಟ್ಟಿದ್ದ.

ಭರತ : ಅಮ್ಮಾ! ಅಮ್ಮಾ! ಏನು ಹೇಳುತ್ತಿರುವೆ? ಅಣ್ಣ ಶ್ರೀರಾಮಚಂದ್ರ ಏನು ತಪ್ಪು ಮಾಡಿದ, ಕಾಡಿಗೆ ಹೋಗುವುದಕ್ಕೆ? ನನ್ನ ಅಣ್ಣ ರಾಮಚಂದ್ರ ಯಾರಿಗೂ ಒಂದು ಕೆಟ್ಟ ಮಾತನ್ನು ಆಡಿದವನು ಅಲ್ಲವಲ್ಲ! ತಂದೆಯ ಅಪ್ಪಣೆ ಮೀರಿದವನೂ ಅಲ್ಲವಲ್ಲ! ತಾಯಿಯವರ ಮನಸ್ಸು ನೋಯಿಸುವವನೂ ಅಲ್ಲವಲ್ಲ! ತಮ್ಮಂದಿರಾದ ನಮಗೆ ಬೇಡದ್ದು ಮಾಡವವನೂ ಅಲ್ಲವಲ್ಲ! ಇಂಥ ಸದ್ಗುಣನಿಧಿಯಾದ ನಮ್ಮಣ್ಣ ಶ್ರೀರಾಮಚಂದ್ರನಿಗೆ ದಂಡಕಾರಣ್ಯ ವನವಾಸವೇ ಅಮ್ಮಾ!

ಕೈಕೇಯಿ: ಶ್ರೀರಾಮಚಂದ್ರ ತಪ್ಪು ಮಾಡುವವನಲ್ಲ. ಆತನು ಈಗಲೂ ತಪ್ಪು ಮಾಡಿಲ್ಲ. ಅವನ ಹಣೆಬರಹವೇ ಹಾಗಿತ್ತು. ಭಾರತ, ತಂದೆಯ ಮಾತನ್ನು ಉಳಿಸುವುದಕ್ಕೆ ಶ್ರೀರಾಮಚಂದ್ರನಿಗೆ ಈಗ ಹದಿನಾಲ್ಕು ವರುಷಗಳ ವನವಾಸ, ನಿನಗೆ ಸಿಂಹಾಸನದ ಪಟ್ಟಾಭಿಷೇಕ ಪ್ರಾಪ್ತವಾಗಿದೆ.

2) ವಿರುದ್ಧಾರ್ಥಕ ಶಬ್ದಗಳನ್ನು ಬರೆಯಿರಿ. (2)

i) ಸುಸ್ಥಿತಿ × ______　　ii) ಒಳ್ಳೆಯ × ______

iii) ಅಪ್ರಿಯ × ______　　iv) ದುರ್ಗುಣ × ______

3) ತಾಯಿ ಕೈಕೇಯಿ ಭರತನಿಗೆ, ರಾಮನ ವನವಾಸದ ಬಗೆಗೆ ಹೇಳಿದುದು ಅವನಿಗೆ ಸರಿ ಎನಿಸಿರಬಹುದೆ? ಇದರ ಬಗೆಗೆ ನಿಮ್ಮ ಅಭಿಪ್ರಾಯವನ್ನು 6–8 ವಾಕ್ಯಗಳಲ್ಲಿ ಬರೆಯಿರಿ. (2)

ಪ್ರ. 1) ಬ) ಕೆಳಗಿನ ಗದ್ಯಖಂಡವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟ ಕೃತಿಗಳನ್ನು ಮಾಡಿರಿ.

1) ಕೆಳಗಿನ ಕೋಷ್ಟಕವನ್ನು ಪೂರ್ಣ ಮಾಡಿರಿ. (2)

| ಮಹಾದೇವನು ಮಕ್ಕಳಿಗೆ ನೀಡಿದ ಸಲಹೆಗಳು : | ಅಮರ ತಂದೆಯ ಮಾತನ್ನು ಪಾಲಿಸಿದ ರೀತಿ : |
|---|---|
| i) | i) |
| ii) | ii) |

ಮಹಾದೇವ ಎಂಬವನು ತುಂಬಾ ಬಡತನದಿಂದ ಮೇಲೆ ಬಂದು ಈಗ ಸಿರಿವಂತನಾಗಿದ್ದನು. ಇವನಿಗೆ ಅಮರ, ಅಜಯ ಇಬ್ಬರು ಮಕ್ಕಳು. ತಂದೆ ಅವರಿಬ್ಬರನ್ನು ಚೆನ್ನಾಗಿ ಸಾಕಿ ಸಲಹಿದ್ದನು.

ಒಮ್ಮೆ ಮಹಾದೇವ ಕಾಯಿಲೆಯಿಂದ ಹಾಸಿಗೆ ಹಿಡಿದನು. ಒಂದು ದಿನ ಕಾಯಿಲೆ ಹೆಚ್ಚಿದಾಗ 'ತಾನು ಇನ್ನು ಬದುಕಿ ಉಳಿಯಲಾರೆ' ಎಂದೆನಿಸಿತು. ತನ್ನ ಮಕ್ಕಳಿಬ್ಬರನ್ನು ಕರೆದು, 'ಮಕ್ಕಳೇ, ಜೀವನದ ನಿಜವಾದ ಅರ್ಥ ನಿಮಗೆ ಗೊತ್ತಿಲ್ಲ. ಅನುಭವದಿಂದ ಕೆಲ ಮಾತುಗಳನ್ನು ಹೇಳಬಯಸುತ್ತೇನೆ. ಕೇಳಿಸಿಕೊಂಡು ನೆನಪಿಟ್ಟು ಅದರಂತೆ ನಡೆಯಿರಿ. ಊರಿಗೊಂದು ಮನೆ ಕಟ್ಟಿರಿ, ರುಚಿಯಾದ ಊಟ ಮಾಡಿರಿ, ಸುಖವಾದ ನಿದ್ರೆ ಮಾಡಿರಿ.'

ಹೀಗೆ ಹೇಳುವಾಗ ಅವನ ಪ್ರಾಣಪಕ್ಷಿ ಹಾರಿ ಹೋಯಿತು.

ಮಹಾದೇವನ ಮರಣದ ಕೆಲ ದಿನಗಳ ನಂತರ ಮಕ್ಕಳು ತಂದೆಯ ಆಸ್ತಿಯನ್ನು ಸಮನಾಗಿ ಹಂಚಿಕೊಂಡು ಬೇರೆ ಬೇರೆ ಮನೆಗಳಲ್ಲಿ ವಾಸಿಸತೊಡಗಿದರು.

ಅಮರ ತನ್ನ ತಂದೆ ಮರಣದ ಸಮಯದಲ್ಲಿ ಹೇಳಿದ ಮಾತುಗಳನ್ನು ನೆನಪಿಸಿ ಕೊಂಡನು. ಅವರ ಮಾತಿನಂತೆಯೇ ತಾನು ಜೀವನದಲ್ಲಿ ನಡೆಯಬೇಕೆಂದು ನಿರ್ಧರಿಸಿದನು. ಅದರಂತೆ ನಡೆಯಲೂ ತೊಡಗಿದನು. ತಂದೆಯ ಮೊದಲಿನ ಮಾತನ್ನು ಈಡೇರಿಸಬೇಕೆಂದು ತನ್ನ ಪಾಲಿಗೆ ಬಂದ ಆಸ್ತಿಯಲ್ಲಿಯ ಹಣದಿಂದ ತನ್ನ ಊರಿನ ಸುತ್ತ ಮುತ್ತಲಿನ ಊರುಗಳಲ್ಲಿ ಒಂದೊಂದು ಮನೆ ಕಟ್ಟಿಸಿದನು. ತಂದೆಯ ಮೊದಲಿನ ಮಾತನ್ನು ನಡೆಸಿದೆನೆಂದು ಮನದಲ್ಲಿ ಸಮಾಧಾನಗೊಂಡನು.

ತಂದೆಯ ಮುಂದಿನ ಮಾತುಗಳನ್ನು ಈಡೇರಿಸಲು ಪ್ರತಿದಿನ ಮೃಷ್ಟಾನ್ನ ಭೋಜನ ಮಾಡಿ ಸುಖದ ಸುಪ್ಪತ್ತಿಗೆಯಲ್ಲಿ ನಿದ್ರಿಸತೊಡಗಿದನು. ತಂದೆಯ ಮಾತುಗಳನ್ನು ಈಡೇರಿಸಿದೆನೆಂದು ತನ್ನಷ್ಟಕ್ಕೆ ತಾನೆ ಹೆಮ್ಮೆಪಟ್ಟುಕೊಂಡನು. ದುಡಿತವನ್ನು ಮರೆತು ಮೈಗಳ್ಳನಾಗತೊಡಗಿದನು. 'ಕುಳಿತು ಉಂಡರೆ ಕುಡಿಕೆ ಹೊನ್ನು ಸಾಲದು' ಎಂಬಂತೆ ಅವನಲ್ಲಿದ್ದ ಹಣ ಕಡಿಮೆಯಾಗುತ್ತ ನಿರ್ಗತಿಕನಾಗತೊಡಗಿದನು.

ಅಜಯ ಮೊದಲಿಗಿಂತಲೂ ಸಿರಿವಂತನಾದನು. ಅಮರನಿಗೆ ತನ್ನ ತಮ್ಮನ ಸಿರಿತನ ಕಂಡು ಸಂತೋಷವಾಯಿತು. ಒಂದು ದಿನ ತಮ್ಮನ ಭೇಟಿಗೆ ಬಂದನು. ಅಜಯ ತನ್ನ ಅಣ್ಣನನ್ನು ಬರಮಾಡಿಕೊಂಡು ಆದರಿಸಿದನು.

ಊಟವಾದ ಮೇಲೆ ಅವರಿಬ್ಬರೂ ಮಾತನಾಡುತ್ತ ಕುಳಿತಾಗ ಅಮರ ಕೇಳಿದನು :

'ತಮ್ಮಾ ನಾನು ತಂದೆ ಹೇಳಿದ ಹಾಗೆಯೇ ನಡೆದೆ. ಊರಿಗೊಂದು ಮನೆ ಕಟ್ಟಿಸಿದೆನು. ವಿಧವಿಧವಾದ ಊಟ ತಯಾರಿಸಲು ಬೇರೆ ಬೇರೆ ಬಾಣಸಿಗರನ್ನು ನೇಮಿಸಿಕೊಂಡೆನು. ಬೆಲೆಯುಳ್ಳ ಹಾಸಿಗೆ ಮಾಡಿಸಿದೆನು. ಆದರೆ ಇದರಿಂದ ಬಡವನಾದೆನು. ನೀನು ಹೇಗೆ ಸಿರಿವಂತನಾದೆ ? ಅಪ್ಪನು ಹೇಳಿದ ಮಾತಿನಂತೆ ನಡೆಯಲಿಲ್ಲವೇ?'

2) ಕೆಳಗಿನ ಪದಬಂಧದಿಂದ ಕೊಟ್ಟ ಶಬ್ದಗಳಿಗೆ (2)
ಪರ್ಯಾಯ ಶಬ್ದಗಳನ್ನು ಆರಿಸಿ ಬರೆಯಿರಿ.

| | | | | | |
|---|---|---|---|---|---|
| ರ್ಯಾ | ಪ | ರ | ಬು | ಮೃ | ತಾ |
| ಭ | ಶ್ರೀ | ಯ | ಪ | ಷ್ಟಾ | ತ |
| ನು | ಮಂ | ತ | ಮಂ | ನ್ನ | ದ್ವಿ |
| ವ | ತ | ಬಾ | ಣ | ಸಿ | ಗ |
| ರೆ | ಬ | ಸ | ಮ | ಧಾ | ನ |

i) ಅಡಿಗೆ ಮಾಡುವವ ..............................

ii) ಒಳ್ಳೆಯ (ರುಚಿಕರ) ಊಟ ......................

iii) ಸಂಪತ್ತು ಉಳ್ಳವ ....................................

iv) ತೃಪ್ತಿ ..........................................................

ಬ) 3) ಮನುಷ್ಯನು ಬಾಳಿನಲ್ಲಿ ಸುಖಕರವಾದ ಜೀವನ ಸಾಗಿಸಬೇಕಾದರೆ ಹೊಂದಿರ-ಬೇಕಾದ ಗುಣಗಳನ್ನು ನಿಮ್ಮ ಮಾತಿನಲ್ಲಿ 6 ರಿಂದ 8 ವಾಕ್ಯಗಳಲ್ಲಿ ಬರೆಯಿರಿ. (2)

## ವಿಭಾಗ II- ಪದ್ಯ (Poetry)

ಪ್ರ. 2) ಅ) ಕೊಟ್ಟ ಪದ್ಯವನ್ನು ಓದಿ ಕೆಳಗಿನ ಕೃತಿಗಳನ್ನು ಮಾಡಿರಿ.

1) ಕೊಟ್ಟ ಹೇಳಿಕೆಗಳಿಗೆ ಯೋಗ್ಯ ಉತ್ತರದ ಕ್ರಮಾಂಕವನ್ನು ಚೌಕಟ್ಟಿನಲ್ಲಿ ಬರೆಯಿರಿ. (2)

i) ಕವಿ ಪದ್ಯದಲ್ಲಿ ಬಾವುಟಕ್ಕೆ ಪರ್ಯಾಯವಾಗಿ ಈ ಶಬ್ದವನ್ನು ಬಳಸಿರುವರು. [ ]

ಕ) ತಿರಂಗಾ  ಖ) ಕೇತನ  ಗ) ಧ್ವಜ  ಘ) ಪಟ

ii) ಕವಿಗೆ ಇದು ಸ್ಥಿರವಾಗಿರಲಿ ಎಂಬ ಆಶೆಯಾಗಿದೆ. [ ]

ಕ) ಶಿಲ್ಪಕಲೆ  ಖ) ಸುಗಂಧ  ಗ) ಕವನ  ಘ) ಸ್ನೇಹಾನುಬಂಧ

ಕನ್ನಡಾಂಬೆಯ ಹಿರಿಮೆ
ನಾನೆನಿತು ಬಣ್ಣಿಸಲಿ
ಹಾರುತಿಹುದು ಕೇತನ
ಪಟಪಟನೆ ಗಗನದಲಿ ॥
ಹಸಿರು ಮುರಿಯುವ ಪೈರು
ಮನುಜನಾತ್ಮದ ಉಸಿರು
ಸಾಹಿತ್ಯ ಶಿಲ್ಪಕಲೆ ತವರು
ಹಂಪೆ .....ಐಹೊಳೆ ...... ಬಿಜಾಪುರ ॥
ಶ್ರೀಗಂಧ ಸುಗಂಧದ ಕಂಪು
ಬೆಂದ ಹೃದಯಕೆ ತಂಪು
ದಾಸರ ಶರಣರ ಪೆಂಪು
ಆಲಿಪ ಮನಕೆ ಬಲು ಇಂಪು ॥
ಬುದ್ಧ-ಬಸವರ ವಚನ
ಒಳಿತು ಮಾರ್ಗದ ರಚನ
ಪಂಪ-ರನ್ನರ ಕವನ
ಅನುದಿನವೂ ನವೀನ ॥
ನಾಡು-ನುಡಿಯು ಚಂದ
ಪ್ರೀತಿ ಪ್ರೇಮದ ಬಂಧ
ತುಂಬಿದ ಎಲ್ಲೆಡೆ ಆನಂದ
ಸ್ಥಿರವಿರಲಿ ಸ್ನೇಹಾನುಬಂಧ ॥

2) ಪದ್ಯದಲ್ಲಿ ಬೇಕಾದ ಎರಡು ಪದಗಳನ್ನು ಕೆಳಗಿನ ಅಕ್ಷರ ಸಮೂಹದಿಂದ ಹುಡುಕಿ ಬರೆಯಿರಿ. (1)

ಹಾ ಗಂ ಧ
ಕೇ
ಲ್ಪ ತ ನು ಶಿ
ಲೆ ಕ ಸ್ನೇ
ನ ಬಂ ಶ್ರೀ

i) .....................

ii) .....................

3) ಕನ್ನಡಾಂಬೆಯ ಗುಣ ವೈಶಿಷ್ಟ್ಯಗಳನ್ನು 6 ರಿಂದ 8 ವಾಕ್ಯಗಳಲ್ಲಿ ಬರೆಯಿರಿ. (2)

ಪ್ರ. 2) ಬ) ಕೊಟ್ಟ ಪದ್ಯವನ್ನು ಓದಿ ಕೆಳಗಿನ ಚಟುವಟಿಕೆಗಳನ್ನು ಮಾಡಿರಿ.

1) ಯೋಗ್ಯ ಪರ್ಯಾಯವನ್ನು ಆಯ್ದು ಬಿಟ್ಟ ಸ್ಥಳ ತುಂಬಿರಿ. (2)

i) ನಾಡಿನ ಒಳಿತಿಗೆ ದೇಹದ ಸವೆಸಿದ ಜನತೆಯ ..............................

ಕ) ನಾಯಕ ಖ) ಸೈನಿಕ ಗ) ಸೇವಕ ಘ) ಪರಾಕ್ರಮಿ

ii) ದೇಶದ ಬಂಧನ ಕಳಚಲು ಹೆಣಗಿದ ..............................

ಕ) ದೇಶಪ್ರೇಮಿ ಖ) ಸ್ವಾತಂತ್ರ್ಯ ಪ್ರೀಯ ಗ) ದೇಶದ್ರೋಹಿ ಘ) ಪರಾಕ್ರಮಿ

ಭಾರತ ಮಾತೆಯ ಬಸಿರಲಿ ಬಂದನು
ಹಿರಿಮೆಯ ಹಿರಿಮಗ ನೇತಾಜಿ
ದೇಶದ ಬಂಧನ ಕಳಚಲು ಹೆಣಗಿದ
ಸ್ವಾತಂತ್ರ್ಯಪ್ರಿಯನು ನೇತಾಜಿ ॥

ಸ್ವಾತಂತ್ರ್ಯಕ್ಕಾಗಿ ಅವಿರತ ಶ್ರಮಿಸಿರಿ
ಎಂದರು ನಮ್ಮಯ ನೇತಾಜಿ
ಕ್ಷತ್ರಿಯ ಧೈರ್ಯದ ಸಿಂಹದ ಶೌರ್ಯದ
ಸಾಹಸಿ ನಾಯಕ ನೇತಾಜಿ ॥

ಬಿಳಿಯರ ಗುಂಡಿಗೆ ಬೆದರದ ಗಂಡೆದೆ
ತೋರಿದ ಗಟ್ಟಿಗ ನೇತಾಜಿ
ಪ್ರತಿ ಸರಕಾರದ ರಚಿಸುವ ಪೌರುಷ
ಮೆರೆದ ಪರಾಕ್ರಮಿ ನೇತಾಜಿ ॥

ಆಂಗ್ಲರ ಸೈನ್ಯಕೆ ಸಡ್ಡು ಹೊಡೆಯುತ
ಸಮರ ಸಾರಿದರು ನೇತಾಜಿ
ನಾಡಿನ ಒಳಿತಿಗೆ ದೇಹದ ಸವೆಸಿದ
ಜನತೆಯ ಸೇವಕ ನೇತಾಜಿ ॥

ಭಾರತ ರಾಷ್ಟ್ರದ ಸೇನೆಯ ಕಟ್ಟಿದ
ಶಿಸ್ತಿನ ಸೈನಿಕ ನೇತಾಜಿ
ಜೈಹಿಂದ್ ಗೀತವ ಮೊದಲಿಗೆ ಹಾಡಿದ
ಗಾಯಕ ಮುಖ್ಯನು ನೇತಾಜಿ ॥

2) ವಿರುದ್ಧಾರ್ಥಕ ಶಬ್ದ ಬರೆಯಿರಿ. (1)

i) ಬಂಧನ × ................

ii) ಕೆಡಕು × ................

3) ನೇತಾಜಿಯವರ ಗುಣಗಳನ್ನು 6 ರಿಂದ 8 ವಾಕ್ಯಗಳಲ್ಲಿ ವಿವರಿಸಿರಿ. (2)

## ವಿಭಾಗ III – ವ್ಯಾಕರಣ (Grammar)

ಪ್ರ. 3) ಕೆಳಗಿನ ಕೃತಿಗಳನ್ನು ಸೂಚನೆಯಂತೆ ಬಿಡಿಸಿರಿ.

ಅ) ಕೆಳಗಿನ ವಾಕ್ಯದಲ್ಲಿಯ ಗೆರೆ ಹೊಡೆದ ಶಬ್ದಗಳ ಲಿಂಗ, ವಚನಗಳನ್ನು ಬರೆಯಿರಿ.

i) ಮಕ್ಕಳಿಗೆ ತಾಯಿಯೇ ಮೊದಲ ಗುರು. (1)

ಲಿಂಗ : [ ] ವಚನ : [ ]

ii) ಪುಣೆಯಲ್ಲಿ ಪರ್ವತಿ ಎಂಬ ಹೆಸರಿನ ಅತ್ಯಂತ ರಮಣೀಯ ಬೆಟ್ಟವಿದೆ (1)

ಲಿಂಗ : [ ] ವಚನ : [ ]

ಬ) ಕೆಳಗಿನ ವಾಕ್ಯದಲ್ಲಿಯ ಕರ್ತೃ, ಕರ್ಮ, ಕ್ರಿಯಾಪದಗಳನ್ನು ಗುರುತಿಸಿ ಬರೆಯಿರಿ.

i) ಅಮರನು ಊಟ ತಯಾರಿಸಲು ಬಾಣಸಿಗರನ್ನು ನೇಮಿಸಿಕೊಂಡನು (1)

ಕರ್ತೃ – [ ] ಕರ್ಮ – [ ] ಕ್ರಿಯಾಪದ – [ ]

ii) ಸುಕರಾಮನು ತನ್ನ ಪತ್ನಿಯೊಡನೆ ಮಾತನಾಡುತ್ತ ಕುಳಿತಿದ್ದನು. (1)

ಕರ್ತೃ – [ ] ಕರ್ಮ – [ ] ಕ್ರಿಯಾಪದ – [ ]

ಕ) ಯೋಗ್ಯ ಪರ್ಯಾಯವನ್ನು ಆಯ್ದು ಕೆಳಗಿನ ವಾಕ್ಯಗಳ ಕಾಲವನ್ನು ಬರೆಯಿರಿ. (1)

[ ಭವಿಷತ್ ಕಾಲ, ವರ್ತಮಾನ ಕಾಲ, ಭೂತಕಾಲ ]

i) ರವಿ ಗಿಡದ ನೆರಳಿನಲ್ಲಿ ಪುಸ್ತಕ ಓದುತ್ತ ಕುಳಿತನು.

ii) ರೋಹಿತನು ಮುಂದಿನ ಪಂದ್ಯದಲ್ಲಿ ಚನ್ನಾಗಿ ಆಡಬಹುದು.

ಡ) ಕೆಳಗಿನ ಶಬ್ದಗಳ ವಚನ ಬದಲಿಸಿ ಬರೆಯಿರಿ. (1)

i) ಜಿಹುಣ [ ] ii) ಪುಸ್ತಕಗಳು [ ]

## ವಿಭಾಗ IV – ಬರವಣಿಗೆಯ ಕೌಶಲ್ಯಗಳು (Writing Skills)

ಪ್ರ. 4) ಕೆಳಗಿನ ಪ್ರತಿಯೊಂದು ಕೃತಿಗಳಿಗೆ 60 ರಿಂದ 80 ಶಬ್ದಗಳಲ್ಲಿ ಉತ್ತರಿಸಬೇಕು.

i) ಕೆಳಗಿನವುಗಳಲ್ಲಿ ಯಾವುದೇ ಒಂದು ಪತ್ರ ಬರೆಯಿರಿ. (4)

> ಪ್ರವಾಸಕ್ಕೆ ಹೋಗಬೇಕೆಂಬ ಬಯಕೆ, ಹಣದ ಅವಶ್ಯಕತೆ, ಪ್ರವಾಸದಲ್ಲಿ ನೋಡುವ ಸ್ಥಳ, ದಿನಾಂಕ, ಜೊತೆ ಬರುವವರ ವಿವರ, ಹೋಗಲು ಮಾಡಿದ ವ್ಯವಸ್ಥೆ, ಊಟ, ವಾಸ್ತವ್ಯದ ನಿಯೋಜನೆ, ಮರಳುವ ದಿನದ ಬಗೆಗೆ ತಿಳಿಸುವದು.

ಈ ಮೇಲಿನ ಅಂಶಗಳನ್ನು ತೆಗೆದುಕೊಂಡು ನಿಮ್ಮ ಸ್ವಂತದ ಕೆಲವು ಅಂಶಗಳನ್ನು ಕೂಡಿಸಿ ತಂದೆಯರಿಗೆ ಒಂದು ಪತ್ರ ಬರೆಯಿರಿ.

ಅಥವಾ

> ಮಾನವನ ಬದುಕಿನಲ್ಲಿ ಆರೋಗ್ಯ ಅತಿ ಮಹತ್ವದ್ದಾಗಿದೆ. ಒಮ್ಮೆ ಆರೋಗ್ಯ ಕೆಟ್ಟು ಹೋದರೆ ಸುಧಾರಿಸಲು ಕಷ್ಟವೆಂದು ಹೇಳಬಹುದು. ಅದಕ್ಕಾಗಿ ನಿಯಮಿತವಾಗಿ ವ್ಯಾಯಾಮ, ಯೋಗ, ಸತ್ವಯುತವಾದ ಆಹಾರ ಸೇವನೆ, ಕಾರ್ಯತತ್ಪರತೆ, ಒಳ್ಳೆಯ ಹವ್ಯಾಸಗಳು ಅತಿ ಅವಶ್ಯಕವಾಗಿವೆ.

ಈ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟು ಕಿರಿಯ ಸಹೋದರನಿಗೆ 'ಆರೋಗ್ಯದ ಮಹತ್ವವನ್ನು ತಿಳಿಸುತ್ತ ಒಂದು ಪತ್ರ ಬರೆಯಿರಿ.

ii) ಕೆಳಗಿನ ಪರಿಚ್ಛೇದದ ಅನುವಾದವನ್ನು ಕನ್ನಡದಲ್ಲಿ ಮಾಡಿರಿ. (4)

> **We students must take care of our environment. Let us start from our home. We should not waste food and water. We should not waste food and water. We must keep our surrounding place clean.**

iii) ಕೆಳಗಿನ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಕಥೆಯನ್ನು ಪೂರ್ತಿಗೊಳಿಸಿ, ಯೋಗ್ಯ ಶೀರ್ಷಿಕೆ (ತಲೆಬರೆಹ) ಯನ್ನು ಕೊಡಿರಿ. (4)

> ಒಂದು ನಾಯಿ .......... ಬಾಯಲ್ಲಿ ರೊಟ್ಟಿಯ ತುಂಡು .............. ನದಿ ದಾಟುವದು ............... ನೀರಿನಲ್ಲಿ ಪ್ರತಿ ಬಿಂಬ ಕಂಡಿತು. .............. ಪ್ರತಿ ಬಿಂಬದ ನಾಯಿಯ ರೊಟ್ಟಿಯ ಮೇಲೆ ಬಯಕೆ ............ ಬಾಯಿ ತೆರೆದು ಬೊಗಳುವದು ................ ಬಾಯಲ್ಲಿಯ ರೊಟ್ಟಿ

ಅಥವಾ

> ಆಮೆ ಮೊಲ ಗೆಳೆಯರು .................... ಓಟದ ಸ್ಪರ್ಧೆ ................ ಮೊಲ ಮುಂದೆ ............... ಗಿಡದ ನೆರಳಲ್ಲಿ ನಿದ್ರೆ ................. ಆಮೆ ಮುಂದೆ .................. ಗುರಿ ಮುಟ್ಟಿತು ................ ಮೊಲದ ಸೋಲು.